(4).

**ಕರ್ನಾಟಕ ವಿಧಾನ ಸಭೆ**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 250 |
| ಸದಸ್ಯರ ಹೆಸರು | ಶ್ರೀ ಶ್ರೀನಿವಾಸ ಜಿ ಹೆಚ್ (ತರೀಕೆರೆ) |
| ಉತ್ತರಿಸುವ ದಿನಾಂಕ | 10.12.2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಕ್ರಮ |
|---|---|---|
| ಅ | 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಪರೀಕ್ಷೆಯು ಪ್ರಸಕ್ತ ಸಾಲಿನ ಆಗಸ್ಟ್ 27 ರಂದು ನಡೆದಿದ್ದು, ಪ್ರಶ್ನೆಪತ್ರಿಕೆಯಲ್ಲಿನ ಭಾಷಾಂತರ ದೋಷದಿಂದಾಗಿ ಸದರಿ ಪರೀಕ್ಷೆಯನ್ನು ರದ್ದುಪಡಿಸಿರುವುದರಿಂದಾಗಿ ಪರೀಕ್ಷೆಗೆ KPSC ಯು ಖರ್ಚು ಮಾಡಿರುವ ವೆಚ್ಚ ಎಷ್ಟು; (ವಿವರ ಒದಗಿಸುವುದು) | 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಪರೀಕ್ಷೆಗೆ ಆಯೋಗವು ಖರ್ಚು ಮಾಡಿರುವ ಅಂದಾಜು ವೆಚ್ಚ ರೂ.13,40,38,388/-ಗಳಾಗಿರುತ್ತದೆ. (ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ). |
| ಆ | KPSC ಆಯೋಜಿಸುವ ವಿವಿಧ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಭಾಷಾಂತರ ಮಾಡಲು ಖಾಯಂ ಸಿಬ್ಬಂದಿಗಳಿದ್ದಾರೆಯೇ; ಇದ್ದಲ್ಲಿ, ಇಂತಹ ದೋಷಗಳಾಗಲು ಕಾರಣಗಳೇನು; | ಆಯೋಗವು ನಡೆಸುವ ವಿವಿಧ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಭಾಷಾಂತರ ಮಾಡಲು ಆಯೋಗದಲ್ಲಿ ಖಾಯಂ ಸಿಬ್ಬಂದಿಗಳಿರುವುದಿಲ್ಲ. ಭಾಷಾಂತರ ಇಲಾಖೆಯ ಭಾಷಾಂತರಕಾರರ ಸೇವೆಯನ್ನು ಪಡೆದು ಭಾಷಾಂತರ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. |
| ಇ | ಪೂರ್ವಭಾವಿ ಪರೀಕ್ಷೆ ರದ್ದತಿಯಿಂದಾಗಿ KPSC/ಸರ್ಕಾರಕ್ಕೆ ಅನಾವಶ್ಯಕವಾಗಿ ಆರ್ಥಿಕ ಹೊರೆ ಉಂಟಾಗಿದ್ದು, ಈ ರೀತಿ ಆರ್ಥಿಕ ಹೊರೆ ಉಂಟಾಗಲು ಕಾರಣೀಭೂತರಾದವರ ಮೇಲೆ KPSC/ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; ಕೈಗೊಂಡಿದ್ದಲ್ಲಿ ಕೈಗೊಂಡ ಕ್ರಮದ ವಿವರ ಒದಗಿಸುವುದು; | ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿಯ ಕನ್ನಡ ಭಾಷಾಂತರ ಕಾರ್ಯವನ್ನು ಯಾವುದೇ ಲೋಪದೋಷಗಳಿಲ್ಲದೆ ಸಿದ್ಧಪಡಿಸಲು ಉನ್ನತ ಮಟ್ಟದಲ್ಲಿ ಹಲವಾರು ಸಭೆಗಳನ್ನು ನಡೆಸಿ, ಆಯೋಗದಲ್ಲಿ ಪರಿಣಿತ ಭಾಷಾಂತರಕಾರರಿಗೆ ಜವಾಬ್ದಾರಿ ನೀಡುವುದು ಹಾಗೂ ಭಾಷಾಂತರವನ್ನು ಖಚಿತಗೊಳಿಸಲು ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದವರನ್ನು ಜವಾಬ್ದಾರರನ್ನಾಗಿ ಮಾಡಲು ಕ್ರಮವಹಿಸುವುದು ಮತ್ತು ಮುಂದಿನ ದಿನಗಳಲ್ಲಿ ಈ ರೀತಿ ಲೋಪ ದೋಷಗಳಾಗದಂತೆ ಜಾಗರೂಕತೆಯಿಂದ ಮತ್ತು ಪಾರದರ್ಶಕತೆಯಿಂದ ಪರೀಕ್ಷೆಗಳನ್ನು ನಡೆಸುವಂತೆ ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. |

ಸಂಖ್ಯೆ: ಸಿಆಸುಇ 292 ಎಸ್‌ಎಸ್‌ಸಿ 2024

(ಸಿದ್ಧರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ

| ಕ್ರ ಸಂ | ವಿವರ | ರೂ.ಗಳಲ್ಲಿ |
|---|---|---|
| 01 | 29 ಜಿಲ್ಲೆಗಳ ಜಿಲ್ಲಾಧಿಕಾರಿ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 38,38,800.00 |
| 02 | 29 ಜಿಲ್ಲೆಗಳ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 4,20,500.00 |
| 03 | 29 ಜಿಲ್ಲೆಗಳ ಖಜಾನಾಧಿಕಾರಿ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 3,82,800.00 |
| 04 | 564 ಪರೀಕ್ಷಾ ಉಪ ಕೇಂದ್ರಗಳ ಸಂಭಾವನೆ ಮೊತ್ತ | 4,18,60,986.00 |
| 05 | ಪರೀಕ್ಷಾ ಕಾರ್ಯನಿರ್ವಹಿಸಿದ ಆಯೋಗದ ಅಧಿಕಾರಿ/ಸಿಬ್ಬಂದಿಗಳ ಸಂಭಾವನೆ ಮೊತ್ತ | 13,99,900.00 |
| 06 | ಆಯೋಗದಿಂದ ಅಂಗವಿಕಲ ಅಭ್ಯರ್ಥಿಗಳಿಗೆ ಒದಗಿಸಲಾದ ಲಿಪಿಕಾರರ ಸೌಲಭ್ಯಕ್ಕಾಗಿ ನೀಡಲಾದ ಸಂಭಾವನೆ ಮೊತ್ತ | 4,21,608.00 |
| 07 | ಸ್ಥಳೀಯ ನಿರೀಕ್ಷಣಾಧಿಕಾರಿಯಾಗಿ ಬೆಂಗಳೂರು ಪರೀಕ್ಷಾ ಉಪಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯನಿರ್ವಹಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಂಭಾವನೆ ಮೊತ್ತ | 1,44,000.00 |
| 08 | ಕ್ಲೋಸ್ಡ್ ಕಂಟೇನರ್ ವಾಹನಗಳ ಬಾಡಿಗೆ ವೆಚ್ಚ | 9,89,214.00 |
| 09 | ಲಘು ವಾಹನಗಳ ಬಾಡಿಗೆ ವೆಚ್ಚ | 6,40,602.00 |
| 10 | ವಿ.ಆರ್.ಎಲ್ ಕೋರಿಯರ್ ಸೇವೆಯ ವೆಚ್ಚ | 2,84,557.00 |
| 11 | ಪರೀಕ್ಷಾ ಕೈಪಿಡಿ ಮತ್ತು ಇತರೆ ಮಾರ್ಗ ಸೂಚಿಗಳ ಮುದ್ರಣ ವೆಚ್ಚ | 9,78,928.00 |
| 12 | ಪೋಲಿಸ್ ಬೆಂಗಾವಲು ಪಡೆ ಸೇವೆಯನ್ನು ಒದಗಿಸಿದ ವೆಚ್ಚ | 5,00,000.00 |
| 13 | ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾದ ಅಧಿಕಾರಿ/ಸಿಬ್ಬಂದಿಯವರಿಗೆ ಕಾಫಿ/ಟೀ/ಊಟ/ತಿಂಡಿ ವೆಚ್ಚವಾಗಿರುವ ಅಂದಾಜು ಮೊತ್ತ | 3,50,000.00 |
| 14 | ಜಾಮರ್ಸ್ ಅಳವಡಿಸುವ ಕಾರ್ಯನಿರ್ವಹಣೆ | 22,82,139.00 |
| 15 | ಫ್ರಿಸ್ಕಿಂಗ್ | 52,72,750.00 |
| 16 | ಫೇಸ್ ರೆಕಗ್ನಿಷನ್ | 48,50,930.00 |
| 17 | ಸಿ.ಸಿ ಕ್ಯಾಮರಾ ಅಳವಡಿಸುವುದು | 1,58,88,000.00 |
| 18 | ಗೌಪ್ಯ ಸಾಮಾಗ್ರಿಗಳ ಮುದ್ರಣ ವೆಚ್ಚ | 5,35,32,674.00 |
| | **ಒಟ್ಟು** | **13,40,38,388.00** |